**Signature and Name of Invigilator**

1. (Signature) ______________________

 (Name) ______________________

2. (Signature) ______________________

 (Name) ______________________

**OMR Sheet No. :** ..............................................
(To be filled by the Candidate)

**Roll No.** | | | | | | | | |

(In figures as per admission card)

**Roll No.** ______________________

(In words)

**J 0 2 1 1 8**

**Time : 2 hours]**

# PAPER - II
# KANNADA

**[Maximum Marks : 200**

Number of Pages in this Booklet : **24**

Number of Questions in this Booklet : **100**

## Instructions for the Candidates

1. Write your roll number in the space provided on the top of this page.
2. This paper consists of hundred multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.
   **Example :** ① ② ● ④ where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the original OMR Sheet to the invigilators at the end of the examination compulsorily and must not carry it with you outside the Examination Hall. You are however, allowed to carry original question booklet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There are no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में सौ बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका का नंबर OMR पत्रक पर अंकित करें और OMR पत्रक का नंबर इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं। आपको सही उत्तर के वृत्त को पेन से भरकर काला करना है जैसा कि नीचे दिखाया गया है।
   **उदाहरण :** ① ② ● ④ जबकि (3) सही उत्तर है।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं। यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें। हालांकि आप परीक्षा समाप्ति पर मूल प्रश्न-पुस्तिका अपने साथ ले जा सकते हैं।
10. **केवल नीले/काले बाल प्वाईंट पेन का ही प्रयोग करें।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है।**
12. **गलत उत्तरों के लिए कोई नकारात्मक अंक नहीं हैं।**



www.examrace.com

## KANNADA
## ಕನ್ನಡ
## PAPER - II
## ಪತ್ರಿಕೆ - II

**Note :** This paper contains **hundred (100)** objective type questions of **two (2)** marks each. **All** questions are **compulsory**.

**ಸೂಚನೆ :** ಈ ಪತ್ರಿಕೆಯಲ್ಲಿ **ನೂರು (100)** ವಸ್ತುನಿಷ್ಠ ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳಿರುತ್ತವೆ. **ಎಲ್ಲಾ** ಪ್ರಶ್ನೆಗಳೂ **ಕಡ್ಡಾಯ.**

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** 'ಸರೋವರದ ಸಿರಿಗನ್ನಡಿಯಲ್ಲಿ' ವಿಮರ್ಶಾಲೇಖನವನ್ನು ಬರೆದ ವಿಮರ್ಶಕ :
(1) ಎಸ್.ವಿ. ಪರಮೇಶ್ವರ ಭಟ್ಟ
(2) ಕುವೆಂಪು
(3) ಎಲ್. ಬಸವರಾಜು
(4) ಜಿ.ಎಚ್. ನಾಯಕ್

**2.** ತಮಟಕಲ್ಲು ಶಾಸನದಲ್ಲಿ ಹೊಗಳಲಾಗಿರುವ ವ್ಯಕ್ತಿ :
(1) ಗುಣಮಧುರಾಂಕ
(2) ಜಿನವಲ್ಲಭ
(3) ಅತ್ತಿಮಬ್ಬೆ
(4) ದೇಕಬ್ಬೆ

**3.** ಕನ್ನಡದ 'ಆದ್ಯ ವಿಡಂಬನ ಕಾವ್ಯ' ಎಂಬ ಹೆಸರಿಗೆ ಪಾತ್ರವಾದ ಕೃತಿ :
(1) ಧರ್ಮಾಮೃತ
(2) ಸಮಯ ಪರೀಕ್ಷೆ
(3) ಪಂಚತಂತ್ರ
(4) ಮಲುಹಣನ ರಗಳೆ

**4.** 'ಪುರಾಣ ಚೂಡಾಮಣಿ' ಎಂದು ತನ್ನ ಕಾವ್ಯದ ಬಗ್ಗೆ ಹೇಳಿಕೊಂಡವನು :
(1) ಪೊನ್ನ
(2) ರಾಘವಾಂಕ
(3) ಮಲ್ಲಣಾರ್ಯ
(4) ನಯಸೇನ

**5.** 'ಪುಣ್ಯಮದು ಕೃಷ್ಣ ಚರಿತಾಮೃತಂ' ಎಂದು ತನ್ನ ಕಾವ್ಯದ ಬಗ್ಗೆ ಹೇಳಿಕೊಂಡವನು :
(1) ರುದ್ರಭಟ್ಟ
(2) ನರಹರಿ
(3) ಲಕ್ಷ್ಮೀಶ
(4) ಚಾಟು ವಿಠಲನಾಥ

**6.** 'ಗೂಡಾರದ ಕವಿ' ತಾನಲ್ಲ ಎಂದವನು :
(1) ರನ್ನ
(2) ಮುದ್ದಣ
(3) ಲಕ್ಷ್ಮೀಶ
(4) ಹರಿಹರ

**7.** ಅತ್ತಿಮಬ್ಬೆಯ ಶಾಸನದಲ್ಲಿ ಕಾಣುವ ಅನೇಕ ಪದ್ಯಗಳು ಈ ಕವಿಯ ರಚನೆಗಳು :
(1) ಇರಿವಬೆಡಂಗ
(2) ರನ್ನ
(3) ಜನ್ನ
(4) ಪೊನ್ನ

**8.** ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಕುರ್ತಕೋಟಿಯವರ ಕೃತಿ :
(1) ಯುಗಧರ್ಮ ಹಾಗೂ ಸಾಹಿತ್ಯದರ್ಶನ
(2) ಭೃಂಗದ ಬೆನ್ನೇರಿ
(3) ಉರಿಯ ನಾಲಗೆ
(4) ಆ ಮನಿ



www.examrace.com

9. 'ಇಂದಿಗೂ ಅದೇ ಕಣ್ಣ ಕಾವಲ ನೆನಪು, ಅದೇ ನೀರುಂಡ ಮಣ್ಣ ತಂಪು
ಊಡುತಿದೆ ತಾಯಿಬೇರು' – ಕವನದ ಈ ಸಾಲುಗಳನ್ನು ಬರೆದವರು :
(1) ಜಿ.ಎಸ್. ಸಿದ್ಧಲಿಂಗಯ್ಯ (2) ಗಂಗಾಧರ ಚಿತ್ತಾಲ
(3) ಕಡೆಂಗೋಡ್ಲು ಶಂಕರಭಟ್ಟ (4) ಎಸ್.ವಿ. ಪರಮೇಶ್ವರಭಟ್ಟ

10. 'ಅಂಗುಲ ಹುಳುವಿನ ಪರಕಾಯ ಪ್ರವೇಶ' – ಈ ಕವನವನ್ನು ಬರೆದವರು :
(1) ರಾಮಚಂದ್ರ ಶರ್ಮ (2) ಗಂಗಾಧರ ಚಿತ್ತಾಲ
(3) ಎ.ಕೆ. ರಾಮಾನುಜನ್ (4) ಎಚ್.ಎಂ. ಚನ್ನಯ್ಯ

11. 'ಸೂರ್ಯ ಅರಮನೆ, ದೇವಸ್ಥಾನಗಳ ಮೇಲೆ ಮಾತ್ರ ಬೆಳಗುವುದಿಲ್ಲ' – ಈ ಸಾಲು ಬರುವ ಕೃತಿ :
(1) ಹರಕೆಯ ಕುರಿ (2) ಸಂಕ್ರಾಂತಿ (3) ಕತ್ತಲೆ ಬೆಳಕು (4) ಟೊಳ್ಳುಗಟ್ಟಿ

12. 'ಶಶಿಪುರ ವಿಷಯಾದ್ರಿಯೊಳಿರದಿರ್ಕೆ ಪುರಾರಿಗಣ' – ಈ ಲಕ್ಷಣ ಯಾವ ಪದ್ಯಬಂಧಕ್ಕೆ ಸಂಬಂಧಿಸಿದ್ದು ?
(1) ಪಿರಿಯಕ್ಕರ (2) ಮೂಲಷಟ್ಪದಿ (3) ಕಂದ (4) ಉತ್ಪಲಮಾಲಾವೃತ್ತ

13. 'ಪಂಪರಾಮಾಯಣ'ದ ಮೂಲ ಆಕರ :
(1) ವಾಲ್ಮೀಕಿ ರಾಮಾಯಣ (2) ಬ್ರಹ್ಮಪುರಾಣ
(3) ಪಉಮಚರಿಯ (4) ಬುದ್ಧಜಾತಕ

14. ಈ ಕತೆ ಹಡಗಿನ ಪ್ರಯಾಣವೊಂದರ ಸಂದರ್ಭದ ಘಟನೆಯನ್ನು ಆಧರಿಸಿದೆ :
(1) ಅವನತಿ (2) ಕ್ಷಿತಿಜ (3) ಪ್ರಶ್ನೆ (4) ಕೊನೆಯ ದಾರಿ

15. ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಚಿತ್ರಿಸಿದ ಕಾದಂಬರಿ :
(1) ಅಪಸ್ವರ (2) ಬದುಕು (3) ಮುಕ್ತಿ (4) ಪುರುಷಾರ್ಥ

16. "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು" ಕೃತಿಯ ಕರ್ತೃ :
(1) ಎಚ್.ಜೆ. ಲಕ್ಕಪ್ಪ ಗೌಡ (2) ಎಚ್.ಎಲ್. ನಾಗೇಗೌಡ
(3) ಜಿ.ಶಂ. ಪರಮಶಿವಯ್ಯ (4) ಬಿ.ಎ. ವಿವೇಕ ರೈ

17. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಘಟನೆಗಳನ್ನು ಆಧರಿಸಿದ ಕಾದಂಬರಿ :
(1) ಮಾಡಿದ್ದುಣ್ಣೋ ಮಹಾರಾಯ (2) ಮಯೂರ
(3) ಇಜ್ಜೋಡು (4) ಪುರುಷೋತ್ತಮ

18. ಸಾಹಿತ್ಯವನ್ನು 'Criticism of Life' ಎಂದು ಹೇಳಿದ ಪಾಶ್ಚಾತ್ಯ ಕಾವ್ಯಮೀಮಾಂಸಕ :
(1) ಐ.ಎ. ರಿಚರ್ಡ್ಸ್ (2) ಟಿ.ಎಸ್. ಎಲಿಯಟ್
(3) ಮ್ಯಾಥ್ಯೂ ಅರ್ನಾಲ್ಡ್ (4) ಬೆನ್ ಜಾನ್ಸನ್



www.examrace.com

19. ಕನ್ನಡದ ಕೆಲ, ಕಿವಿ ಎಂಬ ರೂಪಗಳು ತಮಿಳಿನಲ್ಲಿ ಚಿಲ, ಚೆವಿಯಾಗಿ ಕಂಡುಬರುವಲ್ಲಿ ಕಾಣುವ ಶಬ್ದಾದಿಯ ವ್ಯಂಜನದ ಪರಿವರ್ತನೆ ಯಾವ ಪ್ರಕ್ರಿಯೆಗೆ ಸೇರುತ್ತದೆ ?

(1) ಸ್ವರಾನುವೃತ್ತಿ (2) ಸ್ವರ ಪರಿವರ್ತನೆ

(3) ಅಘೋಷಗಳು ಘೋಷಗಳಾಗುವುದು (4) ತಾಲವ್ಯೀಕರಣ

20. ಇವುಗಳಲ್ಲಿ ಸಮರೂಪಧಾರಣೆಗೆ ಉದಾಹರಣೆ :

(1) ಬೆಳಕು + ಕಿಂಡಿ – ಬೆಳಕಿಂಡಿ (2) ಗರ್ದೆ > ಗದ್ದೆ

(3) ಜನ್ಮ > ಜಲ್ಮ (4) ವಾರಣಾಸಿ > ಬಾರಣಾಸಿ

**ಬಹು ಆಯ್ಕೆಯ ಮಾದರಿಯ ಪ್ರಶ್ನೆಗಳು :**

21. ಇವು ಪಂಪನ ಉಕ್ತಿಗಳು :

(a) ಪೆಂಡಿರ್ ಪೆಂಡಿರೊಳದೆಂತು ಬೆರಸುವರಬಲೇ

(b) ಕೌಂತೇಯರನಿಕ್ಕಿ ಪಂದಲೆಗಳಂ ತಂದೆನ್ನ ಮುಂದಿಕ್ಕು

(c) ಒರ್ವಳ್ ಕೊಡೆವಿಡಿವುದು ಮತ್ತೊರ್ವಳ್ ಚಮರಜವನಿಕ್ಕುತಿರ್ಪುದು

(d) ಪ್ರತಿಜ್ಞಾಗಾಂಗೇಯನದೇಂ ಯಶೋಭಾಗಿಯೋ

ಇವುಗಳಲ್ಲಿ **ಸರಿಯಾದ** ಉತ್ತರ :

(1) (b) ಮತ್ತು (d) (2) (c) ಮತ್ತು (a) (3) (a) ಮತ್ತು (d) (4) (c) ಮತ್ತು (d)

22. ಇವು ಹರಿಶ್ಚಂದ್ರ ಕಾವ್ಯದಲ್ಲಿರುವ ನುಡಿಗಳು :

(a) ಮಂಜು ಮುಸುಕಿದೊಡೇನು ಪರ್ವತವಂಜುವುದೆ

(b) ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು

(c) ಹಾರಿಹೋಯಿತಾಯುಧವೆಂದು ಭೀತಿಗೆ ಮಾರುವೋದನೆ

(d) ಪಾವನ ಕ್ಷೀರಮಂ ಕೊಡುವ ಕೆಚ್ಚಲ ಮಾಂಸ
ವಾವಲೇಸನಿದುಳ್ಳ ಮಧುವನೊಸೆದೀವ ನೊಳವಾವಲೇಸು

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (d) (3) (c) ಮತ್ತು (a) (4) (d) ಮತ್ತು (c)

23. 'ನವ್ಯತೆ'ಯ ಪರಿಕಲ್ಪನೆಯನ್ನು ಕನ್ನಡದಲ್ಲಿ ಪ್ರಚುರಗೊಳಿಸಿದವರು :

(a) ವಿ.ಕೃ. ಗೋಕಾಕ

(b) ಶಾಂತಿನಾಥ ದೇಸಾಯಿ

(c) ಗಂಗಾಧರ ಚಿತ್ತಾಲ

(d) ಜಡಭರತ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (b) ಮತ್ತು (d) (3) (c) ಮತ್ತು (d) (4) (a) ಮತ್ತು (b)



www.examrace.com

**24.** ಇವು ರತ್ನಾಕರವರ್ಣಿಯ ಮಾತುಗಳು :

(a) ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶ

(b) ಸಿಡಿಲು ಹೊಡೆದ ಹಾಗೆ ಬಡತನ ಬಂದರೆ
ಕೊಡವ ಹೊತ್ತು ನೀರ ತರುವರಯ್ಯ

(c) ಆಗಮವಧ್ಯಾತ್ಮವಳವಟ್ಟು ಶೃಂಗಾರ
ತ್ಯಾಗ ಭೋಗದ ಮೋಡಿ ಮೆರೆಯೆ

(d) ಯಾಗ ಪಾಲಕನೊಬ್ಬ ಯಾಗ ಭಂಜನನೊಬ್ಬ
ನಾಗರಕ್ಷಕನೊಬ್ಬ ನಾಗ ಶಿಕ್ಷಕನು ಒಬ್ಬ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (a) ಮತ್ತು (c) (3) (b) ಮತ್ತು (d) (4) (b) ಮತ್ತು (c)

**25.** ಸಮಾಜಶಾಸ್ತ್ರೀಯ ವಿಮರ್ಶೆಯ ಮುಖ್ಯ ಚಿಂತಕರು :

(a) ಜಾರ್ಜ್ ಲುಕಾಸ್

(b) ಎಡ್ಮಂಡ್ ವಿಲ್ಸನ್

(c) ಐ.ಏ. ರಿಚರ್ಡ್ಸ್

(d) ಸಿ.ಜಿ. ಯೂಂಗ್

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (b) ಮತ್ತು (c) (3) (a) ಮತ್ತು (b) (4) (c) ಮತ್ತು (d)

**26.** ಕಪ್ಪೆ ಅರಭಟ್ಟನ ಶಾಸನದಲ್ಲಿ ಬಳಕೆಯಾದ ಪದಗಳು :

(a) ಕಲಿಯುಗ ವಿಪರೀತನ್

(b) ಕಟ್ಟಿದ ಸಿಂಘಮನ್

(c) ಪೃಥಿವಿವಲ್ಲಭ ಮಂಗಲೀಸ

(d) ದಾನ ಪಶುಪತಿ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (c) (3) (c) ಮತ್ತು (d) (4) (a) ಮತ್ತು (d)

**27.** ಇವುಗಳಲ್ಲಿ ಸರಿಯಾದ ಜೋಡಿಗಳನ್ನು ಗುರುತಿಸಿ :

(a) ಊರುಕೇರಿ, ತಪ್ತ

(b) ಸ್ಮೃತಿಪಟಲದಿಂದ, ಸಂಜೆಗಣ್ಣಿನ ಹಿನ್ನೋಟ

(c) ಸುರಗಿ, ಎದೆಗೆ ಬಿದ್ದ ಅಕ್ಷರ

(d) ನೆನಪಿನ ದೋಣಿಯಲ್ಲಿ, ಭಿತ್ತಿ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (c) (3) (c) ಮತ್ತು (d) (4) (b) ಮತ್ತು (d)



www.examrace.com

28. ಇವು ಕನಕದಾಸರ ನುಡಿಗಳು :
(a) ಬೇವು ಬೆಲ್ಲದೊಳಿಡಲೇನು ಫಲ
(b) ಪರದೇಶಿ ನೀನು ಸ್ವದೇಶಿ ನಾನು
(c) ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ
ಕೂಗಿದರು ಧ್ವನಿ ಕೇಳಲಿಲ್ಲವೆ ನರಹರಿಯೆ
(d) ತಲ್ಲಣಿಸದಿರು ಕಂಡ್ಯ ತಾಳು ಮನವೆ
ಇವುಗಳಲ್ಲಿ **ಸರಿಯಾದ** ಉತ್ತರ :
(1) (a) ಮತ್ತು (d) (2) (c) ಮತ್ತು (d) (3) (b) ಮತ್ತು (c) (4) (a) ಮತ್ತು (b)

29. ಇವು ಗೋಪಾಲಕೃಷ್ಣ ಅಡಿಗರ ಕವನದ ಸಾಲುಗಳು :
(a) ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬಾ ಅಗ್ಗ
(b) ಯಾರು ಹೇಳಿದರು ನಾವೆಲ್ಲ ನಿನ್ನ ಮರೆತೆವೆಂದು ?
(c) ಅವನ ಕೊರಳಿಗೇರಿದಂಥ ಮೊದಲ ಹಾರವು ನನ್ನದೇ
(d) ಎಲ್ಲೋ ಹೇಗೋ ಸಾಯುತ್ತೇನೆ – ತಿಳಿಯುವುದಿಲ್ಲ
ಇವುಗಳಲ್ಲಿ **ಸರಿಯಾದ** ಉತ್ತರ :
(1) (a) ಮತ್ತು (c) (2) (b) ಮತ್ತು (c) (3) (c) ಮತ್ತು (d) (4) (b) ಮತ್ತು (d)

30. ಇವು ಆಧುನಿಕ ಮಹಾಕಾವ್ಯಗಳು :
(a) ಶ್ರೀಹರಿಚರಿತೆ
(b) ಸುವರ್ಣಮುತ್ಥಳಿ
(c) ಭವ್ಯಮಾನವ
(d) ಮಾದ್ರಿಯಚಿತೆ
ಇವುಗಳಲ್ಲಿ **ಸರಿಯಾದ** ಉತ್ತರ :
(1) (b) ಮತ್ತು (d) (2) (a) ಮತ್ತು (c) (3) (a) ಮತ್ತು (d) (4) (c) ಮತ್ತು (d)

31. ಇವರು ಪಾಶ್ಚಾತ್ಯ ವಾಸ್ತವವಾದಿ ಪಂಥದ ಪ್ರಮುಖ ಚಿಂತಕರು :
(a) ಕಾಫ್ಕ, ಸಾರ್ತ್ರೆ
(b) ಬಾಲ್ಜಾಕ್, ಟರ್ಜಿನೀವ್
(c) ವರ್ಡ್ಸ್‌ವರ್ತ್, ಕೋಲರಿಜ್
(d) ಟಾಲ್‌ಸ್ಟಾಯ್, ದೊಸ್ತವಸ್ಕಿ
ಇವುಗಳಲ್ಲಿ **ಸರಿಯಾದ** ಉತ್ತರ :
(1) (b) ಮತ್ತು (d) (2) (b) ಮತ್ತು (c) (3) (a) ಮತ್ತು (b) (4) (c) ಮತ್ತು (d)

32. ಇವು **'ಬೆಟ್ಟದರಸು'** ನಾಟಕದಲ್ಲಿ ಬರುವ ಪಾತ್ರಗಳು :
(a) ಸಿಂಗಾರಿ
(b) ಅನಿರುದ್ಧ
(c) ಅಶ್ವಪತಿ
(d) ಚೆಲ್ಲಮ್ಮ
ಇವುಗಳಲ್ಲಿ **ಸರಿಯಾದ** ಉತ್ತರ :
(1) (a) ಮತ್ತು (b) (2) (a) ಮತ್ತು (d) (3) (b) ಮತ್ತು (c) (4) (c) ಮತ್ತು (d)


www.examrace.com

33. ಇವುಗಳಲ್ಲಿ **ಸರಿಯಾದ** ಜೋಡಿಗಳನ್ನು ಗುರುತಿಸಿ :

(a) ಶಿಕಾರಿ, ಕ್ರಾಂತಿಕಾರ ಡಾ॥ ಅಂಬೇಡ್ಕರ್

(b) ನೆಲೆ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ

(c) ನಾನು ಕೊಂದ ಹುಡುಗಿ, ಅಮಾಸ

(d) ಕತೆಯಾದಳು ಹುಡುಗಿ, ನಾಲ್ಕು ಮೊಳ ಭೂಮಿ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (c) (3) (b) ಮತ್ತು (d) (4) (c) ಮತ್ತು (d)

34. 'ಸಾನೆಟ್' ಮತ್ತು 'ಓಡ್' ಪದದ ಸಂವಾದಿ ಕನ್ನಡ ರೂಪಗಳು :

(a) ಸರಳರಗಳೆ

(b) ಅಷ್ಟಷಟ್ಪದಿ

(c) ಮಹಾಛಂದಸ್ಸು

(d) ಪ್ರಗಾಥ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (b) ಮತ್ತು (d) (3) (a) ಮತ್ತು (b) (4) (b) ಮತ್ತು (c)

35. ಇವರು ಕರ್ನಾಟಕದ ವೃತ್ತಿ ಗಾಯಕರು :

(a) ನಲಿಕೆಯವರು, ಭಾಗವತರು

(b) ಪಂಬದರು, ಪರವರು

(c) ಹೆಳವರು, ತಂಬೂರಿಯವರು

(d) ಗೊರವರು, ಕಂಸಾಳೆಯವರು

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (b) ಮತ್ತು (c) (3) (c) ಮತ್ತು (d) (4) (a) ಮತ್ತು (c)

36. ಇವು ಬಂಕಿಮಚಂದ್ರರ ಕಾದಂಬರಿಗಳ ಕನ್ನಡ ಅನುವಾದಗಳು :

(a) ದುರ್ಗೇಶನಂದಿನಿ, ಮೃಣಾಲಿನಿ

(b) ಆನಂದಮಠ, ಅನಾಥ ಪಕ್ಷಿ

(c) ಕಮಲಕುಮಾರಿ, ರಾಜಸಿಂಹ

(d) ಕಪಾಲಕುಂಡಲ, ಚಂದ್ರಶೇಖರ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (a) ಮತ್ತು (b) (3) (b) ಮತ್ತು (d) (4) (a) ಮತ್ತು (d)



www.examrace.com

37. ತೆಲುಗಿನ ಅಸಮಾವೇಶಕ ಸರ್ವನಾಮರೂಪಗಳು :

(a) ಏಮು

(b) ಈರು

(c) ಮೀರು

(d) ಮೇಮು

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (b) (2) (c) ಮತ್ತು (d) (3) (a) ಮತ್ತು (d) (4) (b) ಮತ್ತು (c)

38. ಇವು ವಿ.ಎಂ. ಇನಾಮದಾರರ ಕೃತಿಗಳು :

(a) ಕುವೆಂಪು ಕಾದಂಬರಿಗಳು

(b) ಪಾಶ್ಚಾತ್ಯ ವಿಮರ್ಶೆಯ ಆಧುನಿಕ ಯುಗ

(c) ನವೋದಯ

(d) ಸಾಹಿತ್ಯ ವಿಮರ್ಶೆಯ ಮೂಲ ತತ್ವಗಳು

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (a) ಮತ್ತು (b) (3) (c) ಮತ್ತು (d) (4) (b) ಮತ್ತು (d)

39. ಇವು ಭಾರತೀಯ ಆಲಂಕಾರಿಕರು ಹೇಳುವ ಕಾವ್ಯ ಪ್ರಯೋಜನಗಳು :

(a) ವೃದ್ಧಸೇವಾನುರಾಗ ಮತ್ತು ಕಾಂತಾಸಂಮಿತಿಯ ಉಪದೇಶ

(b) ಅರ್ಥಸಂಪಾದನೆ ಮತ್ತು ಅಮಂಗಲ ನಿವಾರಣೆ

(c) ಯಶಸ್ಸು ಮತ್ತು ತತ್ಕಾಲದಲ್ಲಿ ದೊರಕುವ ಆನಂದ

(d) ಸತತಾಭ್ಯಾಸ ಪ್ರಯತ್ನ ಮತ್ತು ವ್ಯವಹಾರ ಜ್ಞಾನ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (c) (2) (c) ಮತ್ತು (d) (3) (a) ಮತ್ತು (d) (4) (b) ಮತ್ತು (c)

40. ಇವು ಕನ್ನಡದ ಮುಕ್ತ ಆಕೃತಿಮಾಗಳು :

(a) ನೇಸರು

(b) ಸ್ನೇಹ

(c) ಮಳೆ

(d) ಆಹಾರ

ಇವುಗಳಲ್ಲಿ **ಸರಿಯಾದ** ಉತ್ತರ :

(1) (a) ಮತ್ತು (d) (2) (b) ಮತ್ತು (c) (3) (a) ಮತ್ತು (c) (4) (b) ಮತ್ತು (d)



www.examrace.com

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ.**

**ಈ ಕೆಳಗಿನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ (41ನೆಯ ಪ್ರಶ್ನೆಯಿಂದ 45ನೆಯ ಪ್ರಶ್ನೆಯವರೆಗೆ).**

ಕಂ॥ ಎನಗೆ ಹಿತಂ ಬ್ರಾಹ್ಮಣನೀ
ತನೆನ್ನದವಿವೇಕಿಯಾಗಿ ಶಿವಭೂತಿಗೆ ತೊ।
ಟ್ಟನೆ ಬಗೆದನಹಿತಮಂ ತ
ದ್ವನಚರನೆಂತುಂ ಕೃತಘ್ನರೇನಂ ಮಾಡರ್॥

ಅಂತು ಬಗೆದು, ಪೊಟಿಲನಾಳ್ವರಸನಲ್ಲಿಗೆ ಪೋಗಿ,–ದೇವಾ! ನಿಮ್ಮ ತುಡುವಾಭರಣಂಗಳಂ ಪಲವಮೂಲ್ಯವಸ್ತುಗಳಂ ತಂದೆನ್ನ ಮನೆಯೊಳೊರ್ವ ಪಾರ್ವನಿರ್ದಪನೆಂದು ಪೇೞ್ದುದುಮರಸಂ ತಳಾಱರ್ಗೆ ಪೇೞಲೊಡಮವರ್ ಪರಿದಾ ಪಾರ್ವನಂ ಪಿಡಿದು ಪೆಡಗೈಯಂ ಕಟ್ಟಿ ತಂದೊಪ್ಪಿಸುವುದುಮರಸನಾತನ ಕೈಯೊಳಿರ್ದ ವಸ್ತುಗಳೆಲ್ಲಮಂ ಕೊಂಡು ಬೞಿಕ್ಕೆ ಸೆಱೆಯೊಳಿಕ್ಕೆ, ಕಿಱಿದು ಬೇಗಂ ಬೆಱಗಾಗಿರ್ದು, ತನ್ನ ಮರುಳ್ತನಕ್ಕೆ ತಾನೆ ಹಾಸ್ಯಂಗೆಯ್ದು, ತನಗೆ ಬಂಧನಮೋಕ್ಷೋಪಾಯಮಂ ಚಿಂತಿಸಿ, ನಿನಗಧ್ವಾನಮಾದಾಗಳೆನ್ನಂ ನೆನೆವುದೆಂದು ಪಾವು ಪೇೞ್ದು ಪೋದುದಂ ನೆನೆದು ನೋೞ್ಪೆನೆಂದು ನೆನೆಯಲೊಡಮಾ ಪಾವು ಮನದಿಂ ಮುನ್ನವೆ ಬಂದು ಪೊಡೆಮಟ್ಟು–ಬೆಸನೇನೆಂಬುದುಮೀ ಪೊಟಿಲನಾಳ್ವರಸನೆನ್ನರ್ಥಮೆಲ್ಲಮಂ ಕೊಂಡುದಲ್ಲದೆಯುಮೆನಗಿಂತಪ್ಪವಸ್ಥೆಯಂ ಮಾಡಿದನಿದರ್ಕೆ ತಕ್ಕುದುಂ ನೀನೆ ಬಲ್ಲೆಯೆಂಬುದುಮಿದಾವಗಹನಮರಸನ ಪಿರಿಯ ಮಗನನೀಗಳೆ ಪೋಗಿ ಕೊಂದಪೆಂ, ನಿಮಗಲ್ಲದೆ ಪೆಱರಾರ್ಗಂ ಸಾಧ್ಯಮಾಗೆಂ, ನೀಮೊಂದುಪಾಯದಿಂ ಬಂದು ನೀರನಭಿಮಂತ್ರಿಸಿ ತಳಿಯಲೊಡಂ ನಿರ್ವಿಷಮಪ್ಪೆಂ, ಅಲ್ಲಿ ನಿಮ್ಮ ಸ್ವಾರ್ಥಮೆಲ್ಲಮಂ ತೀರ್ಚಿಕೊಳ್ಳಿಮೆಂದು ಪೇೞ್ದು ಪೋಗಿ ನಂದನವನದೊಳಾಡುತ್ತಿರ್ದ ನೃಪನಂದನನಂ ಕಂಡಾಗಳ್ :

ಕಂ॥ ಸಕಲಕಲಾಧರನಂ ರಾ
ಹು ಕೊಳ್ವ ತೆಱದಿಂ ವಿಷಾತಿಭೀಕರದಂಷ್ಟ್ರಾ।
ನಿಕರಂ ಕೊಂಡುದು ನರಪಾ
ಲಕಸುತನಂ ಮಿತ್ರಕಾರ್ಯತತ್ಪರನುರಗಂ॥

ಅಂತು ಪಾವು ಕೊಳಲೊಡಂ, ವಿಷಮವಿಷಧರವಿಷದೂಷಿತನಾಗಿರ್ದ ಕುಮಾರನಂ ಗಾರುಡಿಗರ್ ಬಂದು ಕಂಡು ತಮ್ಮ ತಮ್ಮಱಿವಂದದಿಂ ಮಂತ್ರಿಸಿದೊಡೆಂತುಂ ನಿರ್ವಿಷಮಾಗದಿರ್ಪುದುಮರಸಂ ಕಂಡೀ ಕುಮಾರನನೆತ್ತಿದಂಗೆ ಬೇಡಿತ್ತಂ ಕುಡುವೆನೆಂದು ಡಂಗುರಂಬೊಯ್ಸಲೊಡಂ; ಶಿವಭೂತಿ ಕೇಳ್ದು ತಾನೆತ್ತುವೆನೆಂದು ಪೇೞ್ದೊಡರಸಂ ಕೇಳ್ದು ಪರಿತಂದು ಶಿವಭೂತಿಯಂ ಸೆಱೆಯಂ ಬಿಟ್ಟೊಡಗೊಂಡುಪೋಪುದುಮಾತಂ ಪೋಗಿ ಗುಂಡಿಗೆಯ ನೀರನಭಿಮಂತ್ರಿಸಿ ತಳಿಯಲೊಡಂ; ಕುಮಾರಂ ದಷ್ಟನಿಷ್ಟನಂ ಕಂಡಂತೆ ಭೋಂಕನೆರ್ದು ಕುಳ್ಳಿರ್ದನಂ ಕಂಡರಸಂ ಸಂತೋಷಂಬಟ್ಟು ಶಿವಭೂತಿಗೆ ಪಿರಿದುಂ ವಿಭೂತಿಯಂ ಮಾಡಿ ಆತಂಗೆ ಕಿರಾತನಿಂದಾದವಸ್ಥೆಯಂ ಕೇಳ್ದಾ ಕಿರಾತನಂ ಯಮಪುರಕ್ಕೆ ಕಳುಪಿದಂ.



www.examrace.com

41. 'ಅಲ್ಲಿ ನಿಮ್ಮ ಸ್ವಾರ್ಥಮೆಲ್ಲಮಂ ತೀರ್ಚಿಕೊಳ್ಳಿಂ' – ಇಲ್ಲಿರುವ ಕ್ರಿಯಾಪದವು :
(1) ವಿಧ್ಯರ್ಥಕವಾಗಿದೆ (2) ಪ್ರೇರಣಾರ್ಥಕವಾಗಿದೆ
(3) ನಿಷೇದಾರ್ಥಕವಾಗಿದೆ (4) ಸಾಮಾನ್ಯಾರ್ಥಕವಾಗಿದೆ

42. ಶಿವಭೂತಿಯ ಬಂಧನವಾದುದು ಏಕೆ ?
(1) ಕಿರಾತನಿಗೆ ಆಭರಣಗಳನ್ನು ಕೊಡದೆ ವಂಚಿಸಿದುದಕ್ಕೆ.
(2) ಅರಸನ ಆಭರಣಗಳನ್ನು ತನ್ನ ಕೈಯಲ್ಲಿ ಇಟ್ಟುಕೊಂಡುದಕ್ಕೆ.
(3) ಅರಸನನ್ನು ಹಾಸ್ಯಮಾಡಿದುದಕ್ಕೆ.
(4) ಅರಸನಿಗೆ ಕಾಣಿಕೆಯಾಗಿ ಬೆಲೆಬಾಳುವ ಆಭರಣಗಳನ್ನು ಕೊಡದುದಕ್ಕೆ.

43. 'ಕೊಂಡುದಲ್ಲದೆಯುಮೆನಗಿಂತಪ್ಪವಸ್ಥೆಯಂ' – ಇದರ ಅರ್ಥಪೂರ್ಣವಾದ ವಿಂಗಡಣೆ :
(1) ಕೊಂಡುದು ಅಲ್ಲದೆಯುಮ್ ಎನಗಿಂತು ಅಪ್ಪವಸ್ಥೆಯಂ
(2) ಕೊಂಡುದಲ್ಲದೆಯುಮ್ ಎನಗೂ ಇಂತಪ್ಪ ಅವಸ್ಥೆಯಂ
(3) ಕೊಂಡುದು ಅಲ್ಲದೆಯುಮ್ ಎನಗೇಇಂತಪ್ಪ ಅವಸ್ಥೆಯಂ
(4) ಕೊಂಡುದು ಅಲ್ಲದೆಯುಮ್ ಎನಗೆ ಇಂತು ಅಪ್ಪ ಅವಸ್ಥೆಯಂ

44. ಅರಸನು ಹೊಡೆಸಿದ ಡಂಗುರದ ತಾತ್ಪರ್ಯವೇನು ?
(1) ಕಿರಾತನನ್ನು ಹಿಡಿದು ಕೊಟ್ಟವರಿಗೆ ಬಹುಮಾನ
(2) ರಾಜಕುಮಾರನನ್ನು ರಕ್ಷಿಸಿದವರಿಗೆ ಅವರು ಬೇಡಿದ್ದನ್ನು ಕೊಡುವೆನು
(3) ಅರಸುಕುಮಾರನನ್ನು ಕಚ್ಚಿದ ಹಾವನ್ನು ಹಿಡಿದು ತಂದವರಿಗೆ ಕೈತುಂಬ ಬಹುಮಾನ
(4) ಮಂತ್ರಿಸಿ ವಿಷವನ್ನು ದೂರಮಾಡಿದ ಗಾರುಡಿಗರಿಗೆ ಗೌರವ

45. ಪೆಡಗೈ – ಇಲ್ಲಿರುವ ಸಮಾಸ :
(1) ತತ್ಪುರುಷ ಸಮಾಸ (2) ಕ್ರಿಯಾ ಸಮಾಸ (3) ಅಂಶಿ ಸಮಾಸ (4) ಅರಿ ಸಮಾಸ

46. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?
(1) ರೊಮ್ಯಾಂಟಿಕ್ – 'On the Sublime'
(2) ರೂಪನಿಷ್ಠ – Intution
(3) ವಸಾಹತೋತ್ತರ – Theory of Impersonality
(4) ಮಾರ್ಕ್ಸ್‌ವಾದಿ – ವಸ್ತು ಪ್ರತಿರೂಪ

47. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?
(1) ಪಿ. ಲಂಕೇಶ್ – 'ಬಿಚ್ಚು', 'ತಲೆಮಾರು'
(2) ಆನಂದಕಂದ – 'ಕಾರಹುಣ್ಣಿಮೆ', 'ನಲ್ವಾಡುಗಳು'
(3) ರಾಜರತ್ನಂ – 'ರತ್ನನಪದಗಳು', 'ನಾಗನಪದಗಳು'
(4) ಎಚ್.ಎಂ. ಚನ್ನಯ್ಯ – 'ಮಾಂದಳಿರು', ಏಳುಸುತ್ತಿನ ಕೋಟೆ'



www.examrace.com

**48.** ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಪಳಿಗಂ ಪಾಪಕ್ಕಮಂಜದವರೇಗಯ್ಯರ್ – ರಾಮಚಂದ್ರಚರಿತಪುರಾಣ

(2) ನೀನಿನಿಯಳ್ ವಿಷಮಾತಂ ನೀನತಿಮೃದು ಕಠಿಣಗುಣ ಗಣಾ ಶ್ರಯನಾತನ್ – ಗಿರಿಜಾ ಕಲ್ಯಾಣ

(3) ಮಲಯಾನಿಳಂ ನವ ನೀರಜ ವನಮೆಂಬ ಕೆಂಡದೊಳ್ ದಂಡ ನಮಸ್ಕಾರದೆ ಬಂದಪಂ – ಪಂಪ ಭಾರತ

(4) ನೀನಹರ್ನಿಶಿ ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ – ಪಂಪಾಶತಕ

**49.** ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ರುದ್ರಭಟ್ಟ – ಇರಿವಬೆಡಂಗ

(2) ಚಾಟುವಿಠಲ – ಅಚ್ಯುತರಾಯ

(3) ಲಕ್ಕಣ್ಣ ದಂಡೇಶ – ಪ್ರೌಢದೇವರಾಯ

(4) ನೇಮಿಚಂದ್ರ – ಲಕ್ಷ್ಮೀಧರ

**50.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ತಮಿಳು, ತೊದ – ಉತ್ತರ ದ್ರಾವಿಡ ಭಾಷೆಗಳು

(2) ಮಲಯಾಳಂ, ಕೊಡವ – ದಕ್ಷಿಣ ದ್ರಾವಿಡ ಭಾಷೆಗಳು

(3) ತೆಲುಗು, ಕುರುಖ್ – ಮಧ್ಯದ್ರಾವಿಡ ಭಾಷೆಗಳು

(4) ತಾನ್, ತಾಮ್ – ಮಧ್ಯಮ ಪುರುಷ ಸರ್ವನಾಮಗಳು

**51.** ಈ ಕೆಳಗಿನವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ಜಿ.ಎಸ್. ಅಮೂರ – ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು

(2) ಜಿ.ಎಸ್. ಶಿವರುದ್ರಪ್ಪ – ವಿಶ್ವಮಾನವ ದೃಷ್ಟಿ

(3) ವಿ.ಕೃ. ಗೋಕಾಕ – ಜೀವನ ಸೌಂದರ್ಯ ಮತ್ತು ಸಾಹಿತ್ಯ

(4) ದ.ರಾ. ಬೇಂದ್ರೆ – ಸಾಹಿತ್ಯದ ವಿರಾಟ್ ಸ್ವರೂಪ

**52.** ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ಮಲ್ಲಿನಾಥಪುರಾಣ – ಕಾಮನೆ ಶಿವನ ಹಣೆಗಣ್ಣನ್ನು ನಂದಿಸಿದ ಪ್ರಸಂಗ

(2) ಗಿರಿಜಾಕಲ್ಯಾಣ – ಸುದ್ಧ ಕನ್ನಡ

(3) ಪಂಚತಂತ್ರ – ಶಿವನು ಕಾಮನನ್ನು ಸುಟ್ಟ ಪ್ರಸಂಗ

(4) ತ್ರಿಷಷ್ಟಿಲಕ್ಷಣಮಹಾಪುರಾಣ – ಗೋರಕ್ಷ ಪ್ರಸಂಗ



www.examrace.com

53. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ಬೇಂದ್ರೆ – 'ಏನು ಕೋಮಲ ಕಾಯ! ಹೊಳಪು ಹೊಸಪ್ರಾಯ'

(2) ವಿನಾಯಕ – 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು'

(3) ಚಂದ್ರಶೇಖರ ಕಂಬಾರ – 'ಕಿಟಕಿಯ ಮುಚ್ಚಿದೆನಮ್ಮಾ ಕಿಡಿ ಬೀಳದ ಹಾಗೆ'

(4) ಕೆ.ಎಸ್. ನಿಸಾರ್ ಅಹಮದ್ – 'ಎದೆ ತುಂಬ ಮೊರೆಯುತಿವೆ ಹತ್ತು ಗಾಳಿ'

54. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ನಾಗಾಯಿ ಶಾಸನ – ಕ್ರಿ.ಶ. 1120

(2) ಆತಕೂರು ಶಾಸನ – ಕ್ರಿ.ಶ. 950

(3) ಕುವರಲಕ್ಷ್ಮನ ವೀರಗಲ್ಲು – ಕ್ರಿ.ಶ. 1220

(4) ದೇಕಬ್ಬೆಯ ಶಾಸನ – ಕ್ರಿ.ಶ. 1057

55. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ನವೋದಯ – ದ್ರೌಪದಿಯ ಶ್ರೀಮುಡಿ

(2) ನವ್ಯ – ಅರ್ಥಲೋಕ

(3) ಬಂಡಾಯ – ಪರಂಪರೆಯೊಂದಿಗೆ ಪಿಸುಮಾತು

(4) ಸ್ತ್ರೀವಾದಿ – ಮರದೊಳಗಣ ಕಿಚ್ಚು

56. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ಉತ್ಪಲಮಾಲಾವೃತ್ತ – ಮಾತ್ರಾಛಂದಸ್ಸು

(2) ಕಂದ – ಅರ್ಧಸಮವೃತ್ತ

(3) ಏಳೆ – ಅಕ್ಷರಛಂದಸ್ಸು

(4) ಗಣಪರಿವೃತ್ತಿ – ಅಂಶಛಂದಸ್ಸು

57. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ತಲೆದಂಡ – ಶಹಾಬುದ್ದೀನ್

(2) ಶೂದ್ರ ತಪಸ್ವಿ – ಶಂಭೂಕ

(3) ಸಂಜೀವಿನಿ – ದೇವಯಾನಿ

(4) ಅಹಲ್ಯೆ – ಗೌತಮ

58. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಯೂರಿಪಿಡೀಸ್ – ಮೀಡಿಯ

(2) ಸೊಪೋಕ್ಲಿಸ್ – ಈಡಿಪಸ್

(3) ಶ್ರೀಹರ್ಷ – ರತ್ನಾವಳಿ

(4) ಕಾಳಿದಾಸ – ಸ್ವಪ್ನವಾಸವದತ್ತ



www.examrace.com

59. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಹೀಗೊಂದು ಕತೆ – ಶಾಂತರಸ
(2) ಆಬೋಲಿನ – ಯಶವಂತ ಚಿತ್ತಾಲ
(3) ಕಣ್ಮರೆ – ತ್ರಿವೇಣಿ
(4) ಶೋಧ – ವ್ಯಾಸರಾಯ ಬಲ್ಲಾಳ

60. ಇವುಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ಪವನಜನಾಸ್ಯಮಲ್ಲಿದವನಾನನಮಪ್ಪೊಡೆ ಮಟ್ಟಮಿರ್ದು ನೋಡುವುದೆ – ದುರ್ಯೋಧನ
(2) ಸುರಾದ್ರಿ ನಿಶ್ಚಳ ನಿಬಿಡೋರು ಮಂಡಲಮನಾರುಡಿದರ್ ? – ಭೀಮ
(3) ಚಳಪತಿಯಾದೆ ನೀಂ ಜಳಧಿ ಸಂಭವೆಯಪ್ಪು ದರಿಂ – ಸರಸ್ವತಿ
(4) ಅತ್ತಲಸುರಾರಿ ಬೆಸಸಿದನಿತ್ತಲ್ ರುದ್ರಾವತಾರಂ ನೆರೆದುಯ್ದಪನ್ – ಬಲರಾಮ

61. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ಅ.ನ.ಕೃ. – ನಟ ಸಾರ್ವಭೌಮ
(2) ವಿ.ಎಂ. ಇನಾಂದಾರ್ – ಶಾಪ
(3) ಅನುಪಮ ನಿರಂಜನ – ಅರಮನೆ
(4) ಕೆ.ವಿ. ಅಯ್ಯರ್ – ರೂಪದರ್ಶಿ

62. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ಲಕ್ಕ, ರುಕ್ಮಿಣಿ – ವೈಶಾಖ
(2) ವಿಶ್ವನಾಥ, ನಿರ್ಮಲೆ – ಮೂರು ದಾರಿಗಳು
(3) ರಾಮ ಐತಾಳ, ನಾಗವೇಣಿ – ಮರಳಿ ಮಣ್ಣಿಗೆ
(4) ನಾರಣಪ್ಪ, ಚಂದ್ರಿ – ದೇವದೂತರು

63. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಫ್ಲೀಟ್ ಜೆ.ಎಫ್. – ಲಾವಣಿ
(2) ಎಲ್.ಆರ್. ಹೆಗಡೆ – ಗರತಿಯ ಹಾಡು
(3) ಸಿಂಪಿ ಲಿಂಗಣ್ಣ – ಬಯಲಾಟ
(4) ಎಂ.ಎಸ್. ಲಠ್ಠೆ – ಪಾಡ್ದನ

64. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(1) ರೀತಿರಾತ್ಮಾ ಕಾವ್ಯಸ್ಯ – ದಂಡಿ
(2) ಕಾವ್ಯಸ್ಯಾತ್ಮಾ ಧ್ವನಿಃ – ಜಗನ್ನಾಥ ಪಂಡಿತ
(3) ವಾಕ್ಯಂ ರಸಾತ್ಮಕಂ ಕಾವ್ಯಂ – ವಿಶ್ವನಾಥ
(4) ರಮಣೀಯಾರ್ಥ ಪ್ರತಿಪಾದಕಃ ಕಾವ್ಯಂ – ಭಾಮಹ



www.examrace.com

65. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಗೌಡ ಕನ್ನಡ – ಪ್ರಾದೇಶಿಕ ಉಪಭಾಷೆ

(2) ಹೊಳೆ, ಮಣ್ಣು – ಮಹತ್‌ಲಿಂಗ

(3) ನೀನು, ಅವನು – ಅಭಿವ್ಯಾಪಕ ಸರ್ವನಾಮ

(4) ಕುಣಿಸು, ತಣಿಸು – ಪ್ರೇರಣಾರ್ಥಕ

**ಬಹು ಆಯ್ಕೆಯ ಜೋಡಣೆಯ ಮಾದರಿ :**

66. (a) ಕಾವ್ಯಸಮರ್ಥನೆ — (i) ಅರಿಸ್ಟಾಟಲ್

(b) ಮಹೋನ್ನತಿ — (ii) ಟಿ.ಎಸ್. ಎಲಿಯಟ್

(c) ಕೆಥಾರ್ಸಿಸ್ — (iii) ಕೋಲ್‌ರಿಜ್

(d) ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ — (iv) ಶೆಲ್ಲಿ

(v) ಲಾಂಜಿನಸ್

ಇವುಗಳಿಗೆ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (iii) | (v) | (i) |
| (2) | (iv) | (v) | (i) | (ii) |
| (3) | (iii) | (i) | (iv) | (v) |
| (4) | (i) | (iv) | (iii) | (ii) |

67. (a) ಚಂದ್ರಾಪೀಡ — (i) ವಲಲ

(b) ಅರ್ಜುನ — (ii) ಕಂಕಭಟ್ಟ

(c) ಕೃಷ್ಣ — (iii) ಪಾಶುಪತಾಸ್ತ್ರ

(d) ಭೀಮ — (iv) ಪಾಂಚಜನ್ಯ

(v) ಇಂದ್ರಾಯುಧ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (v) | (iii) | (iv) | (i) |
| (2) | (ii) | (v) | (iii) | (iv) |
| (3) | (iv) | (ii) | (i) | (iii) |
| (4) | (iii) | (iv) | (v) | (ii) |



www.examrace.com

68. (a) ಜೈಮಿನಿ ಭಾರತ (i) ತಿರುಕೊಳವಿನಾಚಿ
(b) ವೃಷಭೇಂದ್ರ ವಿಜಯ (ii) ಮಣಿಕೇತು
(c) ಅಜಿತ ಪುರಾಣ (iii) ಪರಶುರಾಮ
(d) ರಾಜಶೇಖರ ವಿಳಾಸ (iv) ಉದ್ಧಾಲಕ
(v) ಶಿವದೇವ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (iv) | (v) | (ii) |
| (2) | (v) | (ii) | (iii) | (iv) |
| (3) | (iv) | (v) | (ii) | (i) |
| (4) | (ii) | (iii) | (iv) | (v) |

69. (a) ರೊಮ್ಯಾಂಟಿಕ್ ಪಂಥದ ವಿಮರ್ಶಾಕೃತಿ (i) The Meaning of Meaning
(b) ನವ್ಯ ಪಂಥದ ವಿಮರ್ಶಾಕೃತಿ (ii) Structure, Sign and Play
(c) ನವ್ಯೋತ್ತರ ವಿಮರ್ಶಾಕೃತಿ (iii) Things fall apart
(d) ವಸಾಹತೋತ್ತರ ವಿಮರ್ಶಾಕೃತಿ (iv) Defence of Poetry
(v) Culture and Imperialism

ಇವುಗಳಿಗೆ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (i) | (ii) | (v) |
| (2) | (ii) | (i) | (iv) | (iii) |
| (3) | (ii) | (iv) | (i) | (v) |
| (4) | (i) | (iv) | (iii) | (v) |

70. (a) ತೋರಮಾಣಿಕವೆಂದು ಪಿಡಿದರೆ ಭೂರಿ ಕೆಂಡವಿದಾಯ್ತು (i) ಪ್ರಭುಲಿಂಗಲೀಲೆ
(b) ದೇಹದೊಳಗೆ ದೇವಾಲಯವಿದ್ದು ಬೇರೆ ದೇವಾಲಯವೇಕೆ ? (ii) ಚೆನ್ನಬಸವಣ್ಣ
(c) ಓವೋ ಕಾಲ ಪುರುಷಂಗೆ ಗುಣಮಣಮಿಲ್ಲಂ ಗಡ (iii) ನಳಚರಿತ್ರೆ
(d) ಸಿಡಿಲುವಕ್ಕಿಯ ಪಕ್ಕವನು ಕಿತ್ತಡಬಳದ ಬಾಣಸವ ಮಾಡುವ ಕಲಿಗಳಾರುಂಟು (iv) ಅಲ್ಲಮಪ್ರಭು
(v) ಮುದ್ದಣ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (i) | (iv) | (v) |
| (2) | (i) | (iii) | (ii) | (iv) |
| (3) | (iv) | (ii) | (i) | (iii) |
| (4) | (iii) | (iv) | (v) | (i) |


www.examrace.com

71. (a) ಹಂಸತತ್ವವ ಮುಟ್ಟಿ ಬರೆದ ಶಾಸನವನಾರುಂ ಸವರುವ ದಕ್ಷರಿಲ್ಲ — (i) ಜನ್ನ
(b) ಸತ್ಯವೆ ನಮ್ಮ ತಾಯಿತಂದೆ ಸತ್ಯವೇ ನಮ್ಮ ಬಂಧುಬಳಗ — (ii) ರಾಘವಾಂಕ
(c) ಅನುನಯದೊಳೆಲ್ಲಮಂ ಕೊಡಬಹುದು ಬಿಡಬಹುದು ಜನನಿಯಂ ಜನಕನಂ — (iii) ರತ್ನಾಕರವರ್ಣಿ
(d) ನೃಪವರ ನಿರ್ಮಲ ಧರ್ಮದಿಂ ಧರೆಯಂ ಪಾಲಿಸು — (iv) ಕುಮಾರವ್ಯಾಸ
(v) ಗೋವಿನ ಹಾಡು

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (v) | (ii) | (i) |
| (2) | (ii) | (iii) | (v) | (iv) |
| (3) | (i) | (iv) | (iii) | (v) |
| (4) | (iv) | (ii) | (i) | (iii) |

72. (a) ಗುಣಮಣಿಗಣಂಬುಲ್ — (i) ಅತ್ತಿಮಬ್ಬೆ ಶಾಸನ
(b) ಕೊಳ್ಳವೇ ಪುಷ್ಪ ವೃಷ್ಟಿಗಳ್ — (ii) ಕುವರಲಕ್ಷ್ಮನ ವೀರಗಲ್ಲು
(c) ನೆಲೆಗಟ್ಟಾನಾಗಲೋಕಂ — (iii) ಗಂಗಾಧರಂ ಶಾಸನ
(d) ಇಲ್ಲ ಸಲ್ಲದ ಭಾಷೆಗೆ ಕಲ್ಲಂ ನಿರಿಸುವರನ್ — (iv) ಗೊಮ್ಮಟಸ್ತುತಿ
(v) ಹಲ್ಮಿಡಿ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (ii) | (i) | (iv) |
| (2) | (ii) | (i) | (v) | (iv) |
| (3) | (v) | (ii) | (iii) | (iv) |
| (4) | (iii) | (i) | (iv) | (ii) |

73. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಗಳ ವರ್ಷ :
(a) ಶೂನ್ಯಸಂಪಾದನೆಯ ಪರಾಮರ್ಶೆ — (i) 1984
(b) ಕಾವ್ಯಾರ್ಥ ಚಿಂತನ — (ii) 1997
(c) ಹೊಸತು–ಹೊಸತು — (iii) 1972
(d) ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು — (iv) 2006
(v) 2003

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (ii) | (i) | (iii) |
| (2) | (v) | (iii) | (ii) | (iv) |
| (3) | (i) | (iii) | (iv) | (v) |
| (4) | (iii) | (i) | (ii) | (v) |


www.examrace.com

74. (a) ತಿಪ್ಪೇರುದ್ರಸ್ವಾಮಿ (i) ಜೈನ ಧರ್ಮದ ಪರಿಭಾಷೆ
(b) ನಂದೀಮಠ (ii) ಮಹಾಕಾವ್ಯ ಸ್ವರೂಪ
(c) ಪೂಜಾರ ಮ.ಪ್ರ. (iii) ಕರ್ನಾಟಕದ ಧರ್ಮಗಳು
(d) ಎ.ಆರ್. ಕೃಷ್ಣಶಾಸ್ತ್ರಿ (iv) ಶರಣರ ಅನುಭಾವ ಸಾಹಿತ್ಯ
(v) ಕನ್ನಡ ಕೈಪಿಡಿ ಭಾಗ-1

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (iii) | (i) | (v) |
| (2) | (iv) | (i) | (ii) | (iii) |
| (3) | (v) | (ii) | (iii) | (iv) |
| (4) | (ii) | (iii) | (iv) | (v) |

75. (a) ಸಕ್ಕರಿ ಬಾಳಾಚಾರ್ಯ (i) ಕವಿಶಿಷ್ಯ
(b) ಹಲಸಂಗಿ ಚನ್ನಮಲ್ಲಪ್ಪ (ii) ರಸಿಕರಂಗ
(c) ಪಂಜೆಮಂಗೇಶರಾವ್ (iii) ಮಧುರಚೆನ್ನ
(d) ರಂ.ಶ್ರೀ. ಮುಗಳಿ (iv) ಶಾಂತಕವಿ
(v) ದೇವಕೀತನಯ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (i) | (v) | (iii) |
| (2) | (iv) | (i) | (iii) | (ii) |
| (3) | (iv) | (iii) | (i) | (ii) |
| (4) | (v) | (ii) | (iii) | (i) |

76. (a) ಕುವೆಂಪು (i) 'ಕತ್ತಲಿನ ಹಾಳೆಯ ಮೇಲೆ ಭಾಷ್ಯ ಬರೆ–
ಯುತ್ತಲೇ ಇದೆ ಬೆಳಕು, ಈ ಅನುಭವಕ್ಕೆ'
(b) ಜಿ.ಎಸ್. ಶಿವರುದ್ರಪ್ಪ (ii) 'ಶಾನುಭೋಗ ಗೀಚಿದ್ದಕ್ಕೆ ಹೆಬ್ಬೆಟ್ಟನು ಒತ್ತುವವರು'
(c) ಕೆ.ಎಸ್. ನಿಸಾರ್ ಅಹಮದ್ (iii) 'ಬರಿಗೈಲೇ ಬಂದೋರು ಉಸ್ಸೆಂದು ಕೂತೋರು
ಹೊಟ್ಟೆ ಬಟ್ಟೆ ಕಟ್ಟಿದೋರು'
(d) ಸಿದ್ಧಲಿಂಗಯ್ಯ (iv) 'ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿದು ಒದೆಸಿಕೊಂಡಿದ್ದೇವೆ'
(v) 'ಪೀಡಿಸುತ್ತಿಹೆ ಏಕೆ ? ತೊಲಗಾಚೆ ಕೀರ್ತಿಶನಿ
ಸಾಕೆನಗೆ ನಿನ್ನ ಸಹವಾಸ ವಿಭವ ಭ್ರಾಂತಿ'

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (v) | (i) | (ii) | (iii) |
| (2) | (i) | (iv) | (v) | (iii) |
| (3) | (v) | (ii) | (iii) | (i) |
| (4) | (iv) | (ii) | (i) | (v) |


www.examrace.com

77. (a) ಕೆರೂರು ವಾಸುದೇವಾಚಾರ್ಯ (i) ಧರ್ಮದುರಂತ
(b) ಎಂ.ಆರ್. ಶ್ರೀನಿವಾಸಮೂರ್ತಿ (ii) ಯಮಳಪ್ರಶ್ನೆ
(c) ಕೈಲಾಸಂ (iii) ನಳದಮಯಂತಿ
(d) ಪೂರ್ಣಚಂದ್ರ ತೇಜಸ್ವಿ (iv) ಬಹಿಷ್ಕಾರ
(v) ಗುರುದಕ್ಷಿಣೆ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (iv) | (ii) | (i) |
| (2) | (v) | (ii) | (iii) | (iv) |
| (3) | (iii) | (i) | (iv) | (ii) |
| (4) | (iv) | (ii) | (v) | (iii) |

78. (a) ಜಿನಸೇನಾಚಾರ್ಯ (i) ರನ್ನ
(b) ಭಟ್ಟನಾರಾಯಣ (ii) ದುರ್ಗಸಿಂಹ
(c) ದಂಡಿ (iii) ಪಂಪ
(d) ವಸುಭಾಗಭಟ್ಟ (iv) ಶ್ರೀವಿಜಯ
(v) ನಾಗಚಂದ್ರ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (i) | (v) | (iii) |
| (2) | (iii) | (ii) | (iv) | (i) |
| (3) | (i) | (iv) | (v) | (ii) |
| (4) | (iii) | (i) | (iv) | (ii) |

79. (a) ಉತ್ಪಲಮಾಲಾವೃತ್ತ (i) 'ಮಂದರಧರಗಣಮೊಂದಿರೆಕಡೆಯೊಳ್ ಕುಂದದೆ ನೆಲೆಸುಗೆ ಮದನಹರಂ'
(b) ರಗಳೆ (ii) 'ಭರಂನಭಭಂರಲಗಂ ನೆಗಟ್ದಿರಲ್'
(c) ಷಟ್ಪದಿ (iii) 'ಪನ್ನೆರಡು ಮಾತ್ರೆ ಮೊದಲೊಳ್ ಸನ್ನುತಮಿಪ್ಪತ್ತು ಮಾತ್ರೆ ಎರಡನೆಯೆಡೆಯೊಳ್'
(d) ಕಂದ (iv) 'ತಾಳದ ಗಣನೆಗೊಡಂಬಟ್ಟುದು'
(v) 'ಬೆರೆಸಿಬರೆಗದ್ಯಪದ್ಯಮವೆರಡುಂ'

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (v) | (i) | (iv) |
| (2) | (i) | (iii) | (iv) | (ii) |
| (3) | (ii) | (iv) | (i) | (iii) |
| (4) | (iv) | (i) | (iii) | (ii) |



www.examrace.com

80. (a) ಬಯಲಾಟದ ಭೀಮಣ್ಣ (i) ಕೊಡಗಿನ ಗೌರಮ್ಮ
(b) ತಾಯಿ ಸಾಕೀ ಬಾಯಿ (ii) ಬೆಸಗರಹಳ್ಳಿ ರಾಮಣ್ಣ
(c) ಹರಕೆಯ ಹಣ (iii) ಬರಗೂರು ರಾಮಚಂದ್ರಪ್ಪ
(d) ಮಗುವಿನ ರಾಣಿ (iv) ತಿರುಮಲಾಂಬ
(v) ಬಿ.ಟಿ. ಲಲಿತಾ ನಾಯಕ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (v) | (ii) | (i) |
| (2) | (ii) | (i) | (v) | (iii) |
| (3) | (iv) | (v) | (i) | (ii) |
| (4) | (iii) | (v) | (iv) | (i) |

81. (a) ಮೇಡಮ್ಮನ ಗಂಡ (i) ಕುಸುಮಾಕರ ದೇವರಗಣ್ಣೂರ
(b) ಪಾತಾಳದಲ್ಲಿ ಪಾಪಚ್ಚಿ (ii) ಡಿ.ವಿ.ಜಿ.
(c) ಯಾಪಿಲ್ಲು (iii) ನಾ. ಕಸ್ತೂರಿ
(d) ಜ್ಞಾಪಕ ಚಿತ್ರಶಾಲೆ (iv) ಬೀಚಿ
(v) ಕುಂ. ವೀರಭದ್ರಪ್ಪ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (iii) | (ii) | (i) |
| (2) | (iii) | (iv) | (i) | (v) |
| (3) | (iv) | (iii) | (v) | (ii) |
| (4) | (v) | (i) | (iv) | (ii) |

82. (a) ವಿಶೇಷಣಗಳು (i) ವರ್, ಕಳ್
(b) ಸಂಖ್ಯಾವಾಚಕಗಳು (ii) ಅನ್, ಆನ್
(c) ವಿಭಕ್ತಿ ಪ್ರತ್ಯಯಗಳು (iii) ತ್, ದ್
(d) ವಚನ ಪ್ರತ್ಯಯಗಳು (iv) ಚಾಜು, ತೊಣ್
(v) ಇನ್, ನಲ್

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (i) | (v) | (ii) |
| (2) | (v) | (iv) | (ii) | (i) |
| (3) | (iv) | (ii) | (iii) | (v) |
| (4) | (ii) | (iv) | (i) | (iii) |


www.examrace.com

83. (a) ಭಾಸ್ಕರ (i) ಕರುಳಿನ ಕರೆ
(b) ಬೆಳ್ಳಿ (ii) ಮುಸುಕು ತೆಗೆಯೆ ಮಾಯಾಂಗನೆ
(c) ಮೈತ್ರೇಯಿ (iii) ಇಂದಿರಾಬಾಯಿ
(d) ಭಾಗೀರಥಿ (iv) ಮಹಾದರ್ಶನ
(v) ಚೋಮನದುಡಿ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (v) | (iv) | (i) |
| (2) | (ii) | (iv) | (iii) | (v) |
| (3) | (iii) | (v) | (i) | (ii) |
| (4) | (v) | (iii) | (iv) | (i) |

84. (a) ತೆಂಕುತಿಟ್ಟು ಯಕ್ಷಗಾನ (i) ತಬಲಾ
(b) ಮೂಡಲಪಾಯ (ii) ದಪ್ಪು
(c) ಕೃಷ್ಣ ಪಾರಿಜಾತ (iii) ತಾಳ
(d) ಸಣ್ಣಾಟ (iv) ಮುಖವೀಣೆ
(v) ಚೆಂಡೆ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (v) | (iv) | (ii) | (i) |
| (2) | (iii) | (i) | (ii) | (v) |
| (3) | (v) | (iv) | (i) | (ii) |
| (4) | (iv) | (i) | (iii) | (ii) |

85. (a) ಆಖ್ಯಾತ ಪ್ರತ್ಯಯಗಳು (i) ದ, ವ
(b) ತದ್ಧಿತ ಪ್ರತ್ಯಯಗಳು (ii) ಇನ್, ಒಳ್
(c) ಕಾಲಸೂಚಕ ಪ್ರತ್ಯಯಗಳು (iii) ಎನ್, ಎವು
(d) ವಿಭಕ್ತಿ ಪ್ರತ್ಯಯಗಳು (iv) ಗಳು, ಅಂದಿರು
(v) ಇಗ, ವಂತ

ಇವುಗಳಲ್ಲಿ **ಸರಿಯಾದ** ಉತ್ತರ :

| | (a) | (b) | (c) | (d) |
|---|---|---|---|---|
| (1) | (ii) | (iv) | (i) | (iii) |
| (2) | (iii) | (v) | (i) | (ii) |
| (3) | (iii) | (ii) | (iv) | (v) |
| (4) | (i) | (iii) | (ii) | (iv) |


www.examrace.com

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

86. **ಹೇಳಿಕೆ :** ಪೆಣ್ದುಂಬಿಯ ಗಾವರಂಬೊರೆದು
ಪೊಣ್ಮುತಿರ್ದ ಪುಷ್ಪಾಸ್ತ್ರ ಚಾಪಲತಾಜ್ಯಾರವಂ

**ವಿವರಣೆ :** ಹೆಣ್ಣು ದುಂಬಿಯ ಝೇಂಕಾರವೇ ಮನ್ಮಥನ ಹೆದೆಯ ಧ್ವನಿ.

(1) ಹೇಳಿಕೆ ಸರಿ, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ತಪ್ಪು, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ತಪ್ಪು

87. **ಹೇಳಿಕೆ :** ಪದ್ಮ ಪತ್ರದ ಜಲ ಬಿಂದುವಿನಂತೆ ಚಲಿತಮಾದುದು ಚಿತ್ತಂ

**ವಿವರಣೆ :** ನಿಯಂತ್ರಣ ತಪ್ಪದ ಮನಸ್ಥಿತಿಯನ್ನು ಉಪಮಿಸಲಾಗಿದೆ.

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ಸರಿ, ವಿವರಣೆ ಸರಿ
(3) ಹೇಳಿಕೆ ತಪ್ಪು, ವಿವರಣೆ ತಪ್ಪು
(4) ಹೇಳಿಕೆ ಸರಿ ವಿವರಣೆ ತಪ್ಪು

88. **ಹೇಳಿಕೆ :** ಪುರಾತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ.

**ವಿವರಣೆ :** ವ್ಯಕ್ತಿಯ ವರ್ತನೆಗಳಿಗೂ ಜನ್ಮಾಂತರಗಳಿಗೂ ಸಂಬಂಧವಿರುವುದಿಲ್ಲ.

(1) ಹೇಳಿಕೆ ತಪ್ಪು, ವಿವರಣೆ ತಪ್ಪು
(2) ಹೇಳಿಕೆ ಸರಿ, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ತಪ್ಪು, ವಿವರಣೆ ಸರಿ

89. **ಹೇಳಿಕೆ :** ಕೇಳನೊ ಹರಿ ತಾಳನೊ ತಾಳ
ಮೇಳಗಳಿದ್ದು ಪ್ರೇಮವಿಲ್ಲದ ಗಾನ.

**ವಿವರಣೆ :** ಭಕ್ತಿರಹಿತವಾದ ಸಂಗೀತವನ್ನು ದೇವರು ಮೆಚ್ಚುವುದಿಲ್ಲ.

(1) ಹೇಳಿಕೆ ಸರಿ, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ತಪ್ಪು, ವಿವರಣೆ ತಪ್ಪು

90. **ಹೇಳಿಕೆ :** ಅತಿತುಂಗಾಕೃತಿಯಾದೊಡಾಗದ
ದರೊಳ್ ಸೌಂದರ್ಯಮೌನ್ನತ್ಯಮುಂ.

**ವಿವರಣೆ :** ಮಹೋನ್ನತ ಸೌಂದರ್ಯಕ್ಕೂ ಗಾತ್ರಕ್ಕೂ ಸಂಬಂಧ ಉಂಟು.

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ಸರಿ, ವಿವರಣೆ ತಪ್ಪು
(3) ಹೇಳಿಕೆ ತಪ್ಪು, ವಿವರಣೆ ತಪ್ಪು
(4) ಹೇಳಿಕೆ ಸರಿ, ವಿವರಣೆ ಸರಿ

91. **ಹೇಳಿಕೆ :** ರುದ್ರವಿಲಾಸದ ಪರಿಯೇ ಬೇರೆ
ಶಿವಕರುಣೆಯು ಹಿರಿದು.

**ವಿವರಣೆ :** ಎಲ್ಲರನ್ನೂ ಪ್ರಲಯ ಮಾಡುವ ಭಾವಕ್ಕಿಂತ ಆಶೀರ್ವಾದ ಭಾವವು ದೊಡ್ಡದು ಎಂಬ ಧ್ವನಿ ಇದೆ.

(1) ಹೇಳಿಕೆ ಸರಿ, ವಿವರಣೆ ತಪ್ಪು
(2) ಹೇಳಿಕೆ ತಪ್ಪು, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ತಪ್ಪು, ವಿವರಣೆ ತಪ್ಪು



www.examrace.com

92. **ಹೇಳಿಕೆ :** ತುಪ್ಪೇರಿದ ದರ್ಪಣದೊಳ್
ಪಜ್ಜಳಿಸಲಾರ್ಪುದೆ ಪ್ರತಿಬಿಂಬಂ.

**ವಿವರಣೆ :** ಆತ್ಮಶೋಧನೆಯಿಂದ ಮಾತ್ರ ಗುಣ ದೋಷಗಳ ಅರಿವು ಸಾಧ್ಯ.

(1) ಹೇಳಿಕೆ ಸರಿ, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ತಪ್ಪು, ವಿವರಣೆ ತಪ್ಪು

93. **ಹೇಳಿಕೆ :** "ನುತಶಬ್ದಾಲಂಕಾರದೊಳತಿಶಯಮೀ ಕನ್ನಡಕ್ಕೆ
ಸತತಂ ಪ್ರಾಸಂ".

**ವಿವರಣೆ :** ನಿರಂತರವಾದ ಪ್ರಾಸಪ್ರಯೋಗದಿಂದ ಕಾವ್ಯ ರಂಜಿಸುತ್ತದೆ.

(1) ಹೇಳಿಕೆ ಸರಿ, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ಸರಿ
(3) ಹೇಳಿಕೆ ಸರಿ, ವಿವರಣೆ ತಪ್ಪು
(4) ಹೇಳಿಕೆ ತಪ್ಪು, ವಿವರಣೆ ತಪ್ಪು

94. **ಹೇಳಿಕೆ :** ಹೊಸ ಚಿಗುರು, ಹಳೆ ಬೇರು, ಕೂಡಿರಲು ಮರಸೊಬಗು
ಹೊಸಯುಕ್ತಿ, ಹಳೆ ತತ್ವದೊಡಗೂಡಿ ಧರ್ಮ.

**ವಿವರಣೆ :** ಧರ್ಮದ ಬೆಳವಣಿಗೆಗೆ ಹಳೆಯದನ್ನೇ ಹೊಸ ರೀತಿಯಲ್ಲಿ ನೋಡಬೇಕು ಎನ್ನುವ ಧ್ವನಿ ಇಲ್ಲಿ ಇದೆ.

(1) ಹೇಳಿಕೆ ಸರಿ, ವಿವರಣೆ ತಪ್ಪು
(2) ಹೇಳಿಕೆ ಸರಿ, ವಿವರಣೆ ಸರಿ
(3) ಹೇಳಿಕೆ ತಪ್ಪು, ವಿವರಣೆ ಸರಿ
(4) ಹೇಳಿಕೆ ತಪ್ಪು, ವಿವರಣೆ ತಪ್ಪು

95. **ಹೇಳಿಕೆ :** ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯ ಚಂದ್ರರದೊಂದು ಸದ್ದಿಲ್ಲ.

**ವಿವರಣೆ :** ಮನುಷ್ಯನ ಸ್ವಾರ್ಥ ಆಡಂಬರವನ್ನು ಇಲ್ಲಿ ಪರ್ಯಾಯವಾಗಿ ವಿಡಂಬಿಸಲಾಗಿದೆ.

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ಸರಿ, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ತಪ್ಪು, ವಿವರಣೆ ತಪ್ಪು

**ಅನುಕ್ರಮ ಮಾದರಿ ಪ್ರಶ್ನೆಗಳು :**

**ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.**

96. (1) ಭುವನೈಕರಾಮಾಭ್ಯುದಯ, ನೇಮಿನಾಥಪುರಾಣ, ಕಬ್ಬಿಗರ ಕಾವ, ಶಬ್ದಮಣಿದರ್ಪಣ
(2) ನೇಮಿನಾಥಪುರಾಣ, ಶಬ್ದಮಣಿದರ್ಪಣ, ಭುವನೈಕರಾಮಾಭ್ಯುದಯ, ಕಬ್ಬಿಗರ ಕಾವ
(3) ಶಬ್ದಮಣಿದರ್ಪಣ, ಕಬ್ಬಿಗರ ಕಾವ, ಭುವನೈಕರಾಮಾಭ್ಯುದಯ, ನೇಮಿನಾಥಪುರಾಣ
(4) ಕಬ್ಬಿಗರ ಕಾವ, ಶಬ್ದಮಣಿದರ್ಪಣ, ನೇಮಿನಾಥಪುರಾಣ, ಭುವನೈಕರಾಮಾಭ್ಯುದಯ



www.examrace.com

97. (1) ಭಾಗವತ, ಶಬರಶಂಕರವಿಳಾಸ, ರಾಜಾವಳಿಕಥೆ, ನಳಚರಿತ್ರೆ
(2) ಶಬರಶಂಕರವಿಳಾಸ, ಭಾಗವತ, ನಳಚರಿತ್ರೆ, ರಾಜಾವಳಿಕಥೆ
(3) ಭಾಗವತ, ನಳಚರಿತ್ರೆ, ಶಬರಶಂಕರವಿಳಾಸ, ರಾಜಾವಳಿಕಥೆ
(4) ನಳಚರಿತ್ರೆ, ಶಬರಶಂಕರವಿಳಾಸ, ರಾಜಾವಳಿಕಥೆ, ಭಾಗವತ

98. (1) ಮಾಡಿದನ್, ಸಂದನ್; ಮಾಡಿದ, ಸಂದ; ಮಾಡಿದೊನ್, ಸಂದಾನ್; ಮಾಡಿದನು, ಸಂದನು.
(2) ಮಾಡಿದನು, ಸಂದನು; ಮಾಡಿದೊನ್, ಸಂದಾನ್; ಮಾಡಿದನ್, ಸಂದನ್; ಮಾಡಿದ, ಸಂದ.
(3) ಮಾಡಿದ, ಸಂದ; ಮಾಡಿದನ್, ಸಂದನ್; ಮಾಡಿದನು, ಸಂದನು; ಮಾಡಿದೊನ್, ಸಂದಾನ್.
(4) ಮಾಡಿದೊನ್, ಸಂದಾನ್; ಮಾಡಿದನ್, ಸಂದನ್; ಮಾಡಿದನು, ಸಂದನು; ಮಾಡಿದ, ಸಂದ.

99. (1) ರಸೋವೈಸಃ, ಭುವನದ ಭಾಗ್ಯ, ಸಮಕಾಲೀನ, ಜಿಜ್ಞಾಸೆ
(2) ಭುವನದ ಭಾಗ್ಯ, ರಸೋವೈಸಃ, ಜಿಜ್ಞಾಸೆ, ಸಮಕಾಲೀನ
(3) ಜಿಜ್ಞಾಸೆ, ಸಮಕಾಲೀನ, ಭುವನದ ಭಾಗ್ಯ, ರಸೋವೈಸಃ
(4) ಸಮಕಾಲೀನ, ರಸೋವೈಸಃ, ಭುವನದ ಭಾಗ್ಯ, ಜಿಜ್ಞಾಸೆ

100. (1) ಭಾರತೀಪುರ, ಅವಸ್ಥೆ, ದಿವ್ಯ, ಭವ
(2) ಅವಸ್ಥೆ, ಭಾರತೀಪುರ, ಭವ, ದಿವ್ಯ
(3) ಭವ, ದಿವ್ಯ, ಭಾರತೀಪುರ, ಅವಸ್ಥೆ
(4) ಭಾರತೀಪುರ, ಅವಸ್ಥೆ, ಭವ, ದಿವ್ಯ

- o O o -


www.examrace.com

**Space For Rough Work**

Exam Race



www.examrace.com